O.S. 13/2015
PW-1

**ಸಾಕ್ಷಿಯನ್ನು ದಿನಾಂಕಃ 16-10-2024 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಪಾಟೀ ಸವಾಲು 1 ರಿಂದ 7 ನೇ ಪ್ರತಿವಾದಿಗಳ ಪರ ವಕೀಲರವರಿಂದಃ**

ನಾನು ಈಗ ಹುಬ್ಬಳ್ಳಿಯಲ್ಲಿ ವಾಸವಿರುವೆನು. ನಾನು 1978 ನೇ ಸಾಲಿನಿಂದ ಹುಬ್ಬಳ್ಳಿಯಲ್ಲಿ ವಾಸವಿರುವೆನು. ಆಗ ನನಗೆ ಸುಮಾರು 16 ವರ್ಷ ವಯಸ್ಸಾಗಿತ್ತು. 1 ನೇ ವಾದಿ ತುಮಕೂರಿನ ಹತ್ತಿರ ಗೊಮ್ಮಟಗಿರಿಯಲ್ಲಿ ವಾಸವಿರುವರು. ನಾವೆಲ್ಲರೂ ದೊಡ್ಡವರಾದ ನಂತರ ಊರನ್ನು ಬಿಟ್ಟಿದ್ದೇವೆ. ನಾನು, 1 ನೇ ವಾದಿ, 2 ನೇ ವಾದಿ ಮತ್ತು 1 ನೇ ಪ್ರತಿವಾದಿ ಮಾತ್ರ ಊರ ಬಿಟ್ಟಿದ್ದು, 3 ನೇ ವಾದಿ ಹರಪನಹಳ್ಳಿಯಲ್ಲಿ ವಾಸವಿರುವರು. 4 ರಿಂದ 7 ನೇ ಪ್ರತಿವಾದಿಗಳು ಕೂಡ ಈಗ ಊರಿನಲ್ಲಿ ವಾಸವಿರುವುದಿಲ್ಲ. ಗಂಡನ ಮನೆಯಲ್ಲಿರುವರು. ಈ ಊರಿನಲ್ಲಿ ನಮ್ಮ ಕುಟುಂಬದ ಉಸ್ತುವಾರಿಯನ್ನು ಮತ್ತು ವ್ಯವಹಾರವನ್ನು ನಮ್ಮ ತಂದೆ ತಾಯಿಯರು ನೋಡಿಕೊಳ್ಳುತ್ತಿದ್ದರು. ತಂದೆಯ ಮರಣದ ನಂತರ ನನ್ನ ತಾಯಿ ಮುಂದುವರೆಸುತ್ತಿದ್ದರು.

ನಾವು ಯಾರು ಕೂಡ ನನ್ನ ತಾಯಿಯ ಜೀವಿತ ಕಾಲದಲ್ಲಿ ಆಕೆಯನ್ನು ಹರಪನಹಳ್ಳಿಯಲ್ಲಿ ವಾಸವಿದ್ದುಕೊಂಡು ನೋಡಿಕೊಂಡಿರುವುದಿಲ್ಲ ಎಂದರೆ ನಾವು ಹೋಗಿ ಬಂದು ಮಾಡುತ್ತಿದ್ದೆವು. ನನ್ನ ತಾಯಿ ಅನಾರೋಗ್ಯದಿಂದ ಮೃತಪಟ್ಟರು. ಮೃತಪಡುವ ಮುಂಚೆ ಮೂರು ತಿಂಗಳಿನಿಂದ ಆಕೆ ಅನಾರೋಗ್ಯ ಪೀಡಿತಳಾಗಿದ್ದಳು. ಆಕೆಗೆ ಏನು ಅನಾರೋಗ್ಯವಾಗಿತ್ತು ಎಂದು ನನಗೆ ನಿಖರವಾಗಿ ಗೊತ್ತಿಲ್ಲ. ಆಕೆಗೆ ಅನಾರೋಗ್ಯವಾದಾಗ ಮೂರನೇ ವಾದಿ ಹಾಗೂ ಒಂದನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದರು. 3 ನೇ ವಾದಿ ಹರಪನಹಳ್ಳಿಯಲ್ಲಿ ಅವರಿಗೆ ಸೇರಿದ ಮನೆಯಲ್ಲಿಯೇ ವಾಸವಿರುವರು. ನನ್ನ ತಾಯಿಗೆ ಅನಾರೋಗ್ಯವಾದಾಗ ಚಿಕಿತ್ಸೆಯನ್ನು ದಾವಣಗೆರೆ ಆಸ್ಪತ್ರೆಯಲ್ಲಿ ನೀಡಲಾಗುತ್ತಿದೆ ಎಂದು ಫೋನ್ ಮುಖಾಂತರ 3 ನೇ ವಾದಿ ತಿಳಿಸಿದ್ದರು.

ನನ್ನ ತಂದೆ ಧರ್ಮಪ್ಪನಿಗೆ ನಾವು 10 ಜನ ಮಕ್ಕಳು. ಆ ಕುರಿತು ವಂಶವೃಕ್ಷವನ್ನು ಹಾಜರುಪಡಿಸಿದ್ದೇನೆ. ನಾನು ಹಾಜರುಪಡಿಸಿರುವ ವಂಶವೃಕ್ಷವನ್ನು ಗ್ರಾಮಲೆಕ್ಕಿಗರು ನೀಡಿದ್ದು, ತಹಶೀಲ್ದಾರರು ಅಧಿಕೃತವಾಗಿ ನೀಡಿದ ದಾಖಲೆಯಾಗಿರುವುದಿಲ್ಲ ಎಂದರೆ ಸರಿಯಲ್ಲ. ವಂಶವೃಕ್ಷವನ್ನು ತಯಾರು ಮಾಡಲು ಮಾಹಿತಿಯನ್ನು ಇಲಾಖೆಗೆ ನಾವು 5 ಜನ ಅಣ್ಣ ತಮ್ಮಂದಿರು ನೀಡಿರುತ್ತೇವೆ. ವಂಶವೃಕ್ಷವನ್ನು ಬರೆಯಲು ನಾವು ಮಾಹಿತಿಯನ್ನು ಗ್ರಾಮ ಪಂಚಾಯತ್ ನೀಡಿದೆವು. ನಾವು ಹೇಳಿದ್ದನ್ನು ಕೇಳಿ ವಂಶವೃಕ್ಷವನ್ನು ಬರೆದುಕೊಟ್ಟಿರುವರು ಎಂದರೆ ಸರಿ. ವಂಶವೃಕ್ಷವನ್ನು ಕೇಸಿಗೆ ಅನುಕೂಲವಾಗುವಂತೆ

ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನಮ್ಮ ತಂದೆ ತಾಯಿಗೆ ಸ್ವಂತ ಮನೆ ಇರಲಿಲ್ಲ. ದೇವಸ್ಥಾನಕ್ಕೆ ಸೇರಿದ ಮನೆಯಲ್ಲಿ ವಾಸವಿದ್ದರು.

ನನ್ನ ತಂದೆ ಮೃತಪಟ್ಟು 6 ವರ್ಷಗಳ ನಂತರ ನನ್ನ ತಾಯಿ ಮೃತಪಟ್ಟರು. ದಾವಾ ಸ್ವತ್ತು ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿ. ನಾವೆಲ್ಲರೂ ದುಡಿಮೆ ಮಾಡಲು ಸಣ್ಣ ವಯಸ್ಸಿನಲ್ಲಿ ಊರು ಬಿಟ್ಟು ಹೋಗಿದ್ದೆವು ಎಂದರೆ ಸರಿ. ಆದ್ದರಿಂದ ನನ್ನ ತಂದೆ ನನ್ನ ತಾಯಿಯ ಖರ್ಚಿಗೆ ಮತ್ತು ಆರೋಗ್ಯವನ್ನು ನೋಡಿಕೊಳ್ಳಲು ದಾವಾ ಸ್ವತ್ತನ್ನು ಉಪಯೋಗಿಸುವಂತೆ ಹೇಳಿದ್ದರು ಎಂದರೆ ಸರಿಯಲ್ಲ. ನನ್ನ ತಾಯಿ ಅನಾರೋಗ್ಯಕ್ಕೆ ಒಳಗಾದಾಗ ಆಕೆಯ ಆರ್ಥಿಕ ಪರಿಸ್ಥಿತಿ ಸರಿಯಿರಲಿಲ್ಲ ಎಂದರೆ ಸರಿಯಲ್ಲ. ನಾವೇ ಖರ್ಚು ಮಾಡುತ್ತಿದ್ದೆವು. ನಾವು ಯಾರು ಕೂಡ ನಮ್ಮ ತಾಯಿಯನ್ನು ಸರಿಯಾಗಿ ನೋಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಆಕೆ ಒಬ್ಬಂಟಿಯಾಗಿದ್ದರು ಎಂದರೆ ಸರಿಯಲ್ಲ.

1 ನೇ ಪ್ರತಿವಾದಿ ಮಾತ್ರ ನನ್ನ ತಾಯಿಯ ಯೋಗ ಕ್ಷೇಮವನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಾಯಿಯನ್ನು ನಾವು ಯಾರು ಸರಿಯಾಗಿ ನೋಡಿಕೊಳ್ಳದ ಕಾರಣ ಆಕೆ ದಾವಾ ಆಸ್ತಿಯನ್ನು ಮಾರಾಟ ಮಾಡಲು ಯೋಚನೆ ಮಾಡಿರುವರು ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಮಾರಾಟ ಮಾಡುವ ಕಾಲಕ್ಕೆ 1 ನೇ ಪ್ರತಿವಾದಿ ಕುಟುಂಬದ ಎಲ್ಲಾ ಸದಸ್ಯರ ಒಪ್ಪಿಗೆಯನ್ನು ಪಡೆದರು ಎಂದರೆ ಸರಿಯಲ್ಲ. ಆಗ ನಾವು ಅದು ನಮ್ಮ ತಾಯಿಗೆ ಸೇರಿದ ಆಸ್ತಿಯಾಗಿದ್ದು, ಆಕೆ ಯಾರಿಗೆ ಬೇಕಾದರೂ ಮಾರಿಕೊಳ್ಳಲಿ ಎಂದು ಹೇಳಿದ್ದೆವು ಎಂದರೆ ಸರಿಯಲ್ಲ. ನನ್ನ ತಂದೆ ತೀರಿಕೊಂಡ ನಂತರ ದಾವಾ ಆಸ್ತಿಯು ನನ್ನ ತಾಯಿಯ ಹೆಸರಿಗೆ ವರ್ಗಾವಣೆಯಾಯಿತು ಎಂದರೆ ಸರಿ. ಆ ರೀತಿ 2011 ರಲ್ಲಿ ವರ್ಗಾವಣೆಯಾಯಿತು.

ನನ್ನ ತಾಯಿಯ ಹೆಸರಿನಲ್ಲಿ ಆ ಪಹಣಿ 6 ವರ್ಷಗಳ ಕಾಲ ಮುಂದುವರೆದಿತ್ತು. ನನ್ನ ತಂದೆಯ ಎಲ್ಲಾ ವಾರಸುದಾರರ ಹೆಸರಿನಲ್ಲಿ ದಾವಾ ಸ್ವತ್ತು ವರ್ಗಾವಣೆಯಾಗಿರುವುದಿಲ್ಲ ಎಂದರೆ ಸರಿಯಲ್ಲ. ವರ್ಗಾವಣೆಯಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿ ದಾವಾ ಆಸ್ತಿಯನ್ನು ಮಾರಾಟ ಮಾಡಿದ ವಿಚಾರ ನನಗೆ ಆಕೆ ತೀರಿಕೊಂಡ 1 ವರ್ಷದ ನಂತರ ಗೊತ್ತಾಗಿರುತ್ತದೆ. ಸದರಿ 1 ವರ್ಷದ ಅವದಿಯಲ್ಲಿ ನಾನು ದಾವಾ ಆಸ್ತಿಯ ದಾಖಲೆಗಳನ್ನು ಪರಿಶೀಲನೆ ಮಾಡಿರುವುದಿಲ್ಲ. ತಂದೆ ತಾಯಿ ಜೀವಂತ ಇದ್ದಾಗಲೂ ನಾನು ಸದರಿ ದಾಖಲೆಗಳನ್ನು ಪರಿಶೀಲನೆ ಮಾಡಿರುವುದಿಲ್ಲ.

O.S. 13/2015
PW-1

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ನೀಡಲಾಯಿತು**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

16.10.2024

**ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ಹರಪನಹಳ್ಳಿ**